## ಹಿರಿಯ ಶ್ರೇಣಿ ದಿವಾಣಿ ನ್ಯಾಯಾಲಯ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಜೇವರ್ಗಿ

**ಫೌಜುದಾರಿ ಪ್ರಕರಣ ಸಂಖ್ಯೆ :** 87/2019

ಫಿರ್ಯಾದಿ : ಜೇವರ್ಗಿ ಪೋಲಿಸ್ ಠಾಣೆ ಪರವಾಗಿ

-ವಿರುದ್ದ-

ಆರೋಪಿಃ 01. ಶ್ರೀ ರುಕ್ಕಪ್ಪಾ ತಂದೆ ಚಂದ್ರಶ್ಯಾ ಭೋಗನಕರ್,
ವಯಸ್ಸುಃ 40 ವರ್ಷ, ಉದ್ಯೋಗ : ಕೆ.ಎಸ್.ಆರ್.ಟಿ.ಸಿ. ಬಸ್ ಚಾಲಕ,
ಸಾಕಿನ : ಸಿಂದಗಿ (ಬಿ), ತಾಃ ಜಿಃ ಕಲಬುರ್ಗಿ.

**(Abated)**

02. ಶ್ರೀ ಸೋಮಶೇಖರ ತಂದೆ ಅವುರಪ್ಪ ಕವಿತಾಳ,
ವಯಸ್ಸುಃ 33 ವರ್ಷ, ಉದ್ಯೋಗ : ಕೆ.ಎಸ್.ಆರ್.ಟಿ.ಸಿ. ಬಸ್ ಚಾಲಕ,
ಸಾಕಿನ : ಎಣ್ಣೆ ವಡಗೇರಾ, ತಾಃ ಸುರಪೂರ,
ಜಿಃ ಕಲಬುರ್ಗಿ.

## ಆರೋಪಣೆ

ಶ್ರೀ ಕುಮಾರ ಜಿ, ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಯಾದ ನಾನು ಆರೋಪಿಯಾದ ನಿನ್ನ ಮೇಲೆ ಈ ಕೆಳಕಂಡಂತೆ ಆರೋಪಣೆಯನ್ನು ಹೊರಿಸುತ್ತೇನೆಃ

ದಿನಾಂಕ 02-06-2018 ರಂದು ಮುಂಜಾನೆ 08-15 ಸುಮಾರಿಗೆ ಜೇವರ್ಗಿ ಪೋಲಿಸ ಠಾಣೆ ಸರಹದ್ದಿನಲ್ಲಿರುವ ಜೇವರ್ಗಿ ಹೊರವಲಯದ ಕ್ರೀಡಾಂಗಣದ ಹತ್ತಿರ ಇರುವ ಗೋಲಯ್ಯ ಇವರ ಪ್ಲಾಟಗಳ ಹತ್ತಿರ ಜೇವರ್ಗಿ-ಶಹಾಪೂರ ರಸ್ತೆಯ ಮೇಲೆ 1 ನೇ ಆರೋಪಿತನಾದ ನೀನು ಕೆ.ಎಸ್.ಆರ್.ಟಿ.ಸಿ. ಬಸ್ಸ ಸಂಖ್ಯೆ KA-32/F-2244 ನೇದ್ದನ್ನು ಅತಿವೇಗವಾಗಿ ನಿಷ್ಕಾಳಜಿತ ವ ನಿರ್ಲಕ್ಷ್ಯತನದಿಂದ ಮಾನವೀಯ ಪ್ರಾಣಕ್ಕೆ ಅಪಾಯವಾಗುವ ರೀತಿಯಲ್ಲಿ ಚಾಲನೆ ಮಾಡಿಕೊಂಡು ಹೋಗಿ ಎದುರಿಗೆ 2 ನೇ ಆರೋಪಿತನು ನಡೆಸಿಕೊಂಡು ಬರುತ್ತಿದ್ದ ಕೆ.ಎಸ್.ಆರ್.ಟಿ.ಸಿ. ಬಸ್ಸ ಸಂಖ್ಯೆ: KA-33/F-0519 ನೇದ್ದಕ್ಕೆ ಡಿಕ್ಕಿ ಮಾಡಿ ಅಪಘಾತಪಡಿಸಿ ನೀನು ಭಾರತೀಯ ದಂಡ ಸಂಹಿತೆಯ ಕಲಂ 279 ರಡಿಯಲ್ಲಿ ಅಪರಾಧವನ್ನು ಎಸಗಿರುವಿ.

ಎರಡನೇದಾಗಿ ಮೇಲೆ ನಮೂದಿಸಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಮೇಲೆ ವಿವರಿಸಿದ ಪ್ರಕಾರ ಆರೋಪಿತನಾದ ನಿನ್ನ ತಪ್ಪಿನಿಂದ ಅಪಘಾತವಾಗಿದ್ದರಿಂದ ಸದರಿ ಕೆ.ಎಸ್.ಆರ್.ಟಿ.ಸಿ. ಬಸ್ಸ ನಲ್ಲಿ ಕುಳಿತು ಪ್ರಮಾಣಿಸುತ್ತಿದ್ದ ಚಾಸಾ-1, 1) ವೀಣಾ, 2) ಓಂ ಸಿದ್ದರಾಜ, 3) ಮಹ್ಮದಗೌಸ ಮತ್ತು 2ನೇ ಆರೋಪಿತನಿಗೆ ಸಾದಾ ಮತ್ತು ಚಾಸಾ-19 ಸಂಗನಗೌಡ ತಂದೆ ಭೀಮರಾಯಗೌಡ ಪೋಲಿಸಪಾಟೀಲ, ಚಾಸಾ-20 ಮಲ್ಲಪ್ಪಾ ತಂದೆ ಪದ್ಮಣ್ಣ ಕನ್ನೂರ, ಚಾಸಾ-21 ಹಾಜಿಮೀಯಾ ತಂದೆ ಮಶ್ಯಾಕ ಪಟೇಲ ಅವಧಾನ, ಚಾಸಾ-22 ಚಾಂದಪಾಶ್ಯಾ ತಂದೆ ಗುಲಾಮ ಹುಸೇನ ಬೋಡೆ, ಚಾಸಾ-23 ಗುರಪ್ಪಾ ತಂದೆ ಚೆನ್ನಪ್ಪಾ ಕಟ್ಟಿಮನಿ, ಚಾಸಾ-24 ಮಲ್ಲಿಕಾರ್ಜುನ ತಂದೆ ರಾಮಣ್ಣ ಚವಾಣ, ಚಾಸಾ-25 ಮಹಿಮೂದ ಅಹ್ಮದ ತಂದೆ ಗುಲಾಮ ರಸೂಲ ತಿಮ್ಮಾಪೂರಿ, ಚಾಸಾ-26 ರಾಜಮಹ್ಮದ ತಂದೆ ಮೀರಾಸಾಬ ಹಾತಿವಾಲೆ, ಚಾಸಾ-27 ಗುಂಡಪ್ಪಾ @ ಗುಂಡಪ್ಪಗೌಡ ತಂದೆ ಓಂಕಾರೆಪ್ಪಗೌಡ ಪೋಲಿಸಪಾಟೀಲ, ಚಾಸಾ-28 ಕಮಲಾ ಗಂಡ ಶ್ರೀನಿವಾಸ ಕಾಂಬಳೆ, ಚಾಸಾ-29 ವೇದರೇಖಾ ಗಂಡ ವಿಠಣ ಛತ್ರಬಂದಿ, ಚಾಸಾ-30 ಕಮಲಮ್ಮ ಗಂಡ ಯಂಕಪ್ಪ ಬೂದನಾಳ, ಚಾಸಾ-31 ಸಾಬೇರಾ ಬೇಗಂ ಗಂಡ ಖುರ್ಷಿದ ಹಸನ ಲಾವರೆವಾಲೆ, ಚಾಸಾ-32 ಆಶಾ ಗಂಡ ವಿಜಯರಾವ ದೇಶಪಾಂಡೆ, ಚಾಸಾ-33 ಶಾರೀಪಾ ತಮಕೀನ ಗಂಡ ಮಹ್ಮದ ಅಶ್ರಪ್ ಶಹಾಪೂರ, ಚಾಸಾ-34 ಸಾಧಿಯಾ ಸುಲ್ತಾನಾ ಗಂಡ ಮಹ್ಮದ ಸಲೀಮ, ಚಾಸಾ-35 ಅಬ್ದುಲಸಯೀದ ತಂದೆ ಅಬ್ದುಲ ಗಫೂರ ಮನದುರ್ಗ, ಚಾಸಾ-36 ಅಬ್ದುಲಅಸ್ಲಾಂ ತಂದೆ ಅಬ್ದುಲ ರಜಾಕ ಫಾತೆಖಾನಿ, ಚಾಸಾ-37 ಮಹ್ಮದ ನೂರಖಾನ್ ಸಲೀಂ ತಂದೆ ಖುರ್ಷಿದ ಖಾನ್, ಚಾಸಾ-38 ಮನೋಜಕುಮಾರ ತಂದೆ ಚಂದ್ರಶಾ ಬೋಗನಕರ್, ಚಾಸಾ-39 ವಿಠಲ ತಂದೆ ಚಂದ್ರಶಾ ಬೋಗನಕರ್ ಮತ್ತು ಚಾಸಾ-11 ಸುಧಾಕರ ತಂದೆ ಮಾರುತಿ ಕಾಳೆ ಸಿಂಘೆ, ಚಾಸಾ-12 ಖಾದರ ಪಟೇಲ ತಂದೆ ಚಿನ್ನುಪಟೇಲ ಸರಪಟೇಲ, ಚಾಸಾ-13 ಗಂಗಾಧರ ತಂದೆ ಅಪ್ಪಾರಾವ ನೀಲೂರ, ಚಾಸಾ-14 ಮಹ್ಮದ ರಫೀಕ ತಂದೆ ಮಹ್ಮದಜಾಫರಸಾಬ ಶೇಖ, ಚಾಸಾ-15 ಚಂದ್ರಶೇಖರ ತಂದೆ ಸಂಗಶೆಟ್ಟಿ ಪಾಟೀಲ, ಚಾಸಾ-16 ಮಾಲನಬೇಗಂ ಗಂಡ ರಾಜಮಹ್ಮದ ಹಾತಿವಾಲೆ, ಚಾಸಾ-17 ಮರೆಮ್ಮಾ ಗಂಡ ನಾಗಪ್ಪ ಚೌಲಕರ, ಚಾಸಾ-18 ಮಹಿಮೂದಾ ಬೇಗಂ ಗಂಡ ರಾಜಮಹ್ಮದ ಹಾತಿವಾಲೆರವರಿಗೆ ಭಾರಿ ಸ್ವರೂಪದ ಗಾಯಗಳಾಗಿದ್ದರಿಂದ ಆರೋಪಿತನಾದ ನೀನು ಭಾರತೀಯ ದಂಡ ಸಂಹಿತೆಯ ಕಲಂ 337 ಮತ್ತು 338ರಡಿಯಲ್ಲಿ ಅಪರಾಧವನ್ನು ಎಸಗಿರುವಿ.

ಮೂರನೇದಾಗಿ ಮೇಲೆ ನಮೂದಿಸಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಮೇಲೆ ವಿವರಿಸಿದ ಪ್ರಕಾರ ನೀನು ಅಪಘಾತವನ್ನುವುಂಟು ಮಾಡಿದ್ದರಿಂದ ಸದರಿ ಕೆ.ಎಸ್.ಆರ್.ಟಿ.ಸಿ. ಬಸ್ಸನಲ್ಲಿ ಕುಳಿತು ಪ್ರಯಾಣಿಸುತ್ತಿದ್ದ 1) ಆಯೇಶಾ ಸಿದ್ದಿಕಾ, 2) ಫರೀನಬೇಗಂ, 3) ಸಹರಾ ಖಾತೂನ ಎನ್ನುವವರಿಗೆ ಮಾರಣಾಂತಿಕ ಗಾಯಗಳಾಗಿ ಅವರು ಮರಣಹೊಂದಿದ್ದು ಅವರ ಮರಣವು

ನಿನ್ನ ನಿರ್ಲಕ್ಷತನದ ಕೃತ್ಯದಿಂದ ಉಂಟಾದ ಮಾನವ ಹತ್ಯೆಯಲ್ಲದ ಮರಣವಾದ್ದರಿಂದ, ಆರೋಪಿತನಾದ ನೀನು ಭಾರತೀಯ ದಂಡ ಸಂಹಿತೆಯ ಕಲಂ 304(A) ರಡಿಯಲ್ಲಿ ಅಪರಾಧವನ್ನು ಎಸಗಿರುವಿ.

ಕೊನೆಯದಾಗಿ ಮೇಲೆ ನಮೂದಿಸಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಮೇಲೆ ವಿವರಿಸಿದ ವಿಷಯಕ್ಕೆ ಸಂಬಂಧಿಸಿದಂತೆ ನೀನು ಅಪಘಾತವನ್ನುವುಂಟು ಮಾಡಿದ್ದರಿಂದ ಚಾಸಾ-11 ರಿಂದ 18 ಮತ್ತು ಚಾಸಾ-19 ರಿಂದ 34 ರವರಿಗೆ ಭಾರಿ ಸ್ವರೂಪದ ಗಾಯಗಳಾಗಿದ್ದು ಅವರಿಗೆ ನೀನು ಯಾವುದೇ ಚಿಕಿತ್ಸೆಗೆ ಯಾವುದೇ ವ್ಯವಸ್ಥೆ ಮಾಡದೆ ಸ್ಥಳದಿಂದ ಪರಾರಿಯಾಗಿದ್ದರಿಂದ ಆರೋಪಿತನಾದ ನೀನು ಮೋಟಾರ ವಾಹನ ಕಾಯ್ದೆ ಕಲಂ 187 ರಡಿಯಲ್ಲಿ ಸಹ ಕಲಂ 134 ರಡಿಯಲ್ಲಿ ಅಪರಾಧವನ್ನು ಎಸಗಿರುವಿ.

ಪ್ರಶ್ನೆ-1ಃ ಇದೀಗ ಹೇಳಿದ ಮೇಲಿನ ಆಪಾದನೆ ತಿಳಿಯಿತಾ?

ಉತ್ತರಃ

ಪ್ರಶ್ನೆ-2ಃ ಸದರಿ ಆಪಾದನೆಯನ್ನು ಒಪ್ಪಿಕೊಳ್ಳುವಿಯಾ ಅಥವಾ ವಿಚಾರಣೆಯಾಗಬೇಕೆ?

ಉತ್ತರಃ

(ಸದರಿ ಹೇಳಿಕೆಯನ್ನು ನನ್ನ ಸಮಕ್ಷಮ ಆರೋಪಿಗೆ ಅರ್ಥವಾಗುವ ಭಾಷೆಯಲ್ಲಿ ಓದಿ ಹೇಳಿದ್ದು ಆರೋಪಿಯು ನ್ಯಾಯ್ಯಾಲಯದ ಮುಂದೆ ನೀಡಿದ ವಿಚಾರಣೆಗಳು ಸರಿ ಇರುತ್ತವೆ ಅಂತಾ ಈ ಮೂಲಕ ಪ್ರಮಾಣಿಕರಿಸಲಾಗಿದೆ.)

ಸ್ಥಳಃ ಜೇವರ್ಗಿ
ದಿನಾಂಕಃ 04-07-2019

**(ಶ್ರೀ ಕುಮಾರ ಜಿ)**
ಹಿರಿಯ ಶ್ರೇಣಿ ದಿವಾಣಿ ನ್ಯಾಯ್ಯಾಧೀಶರು
ಮತ್ತು ಜೆಎಮ್ ಎಫ್, ಜೇವರ್ಗಿ